ಲಾಕ್‌ಔಟ್ ಆಗಿರುವ ಗಿರಣಿಗಳನ್ನು ಪುನಃ ಪ್ರಾರಂಭಿಸುವ ಬಗ್ಗೆ

2177: ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯದಲ್ಲಿರುವ ಜವಳಿ ಗಿರಣಿಗಳ ಸಂಖ್ಯೆ;

2. ಈ ಗಿರಣಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ;

3. ಇವುಗಳ ಪೈಕಿ ಲಾಕ್‌ಔಟ್ ಆಗಿರುವ ಗಿರಣಿಗಳ ಸಂಖ್ಯೆ;

4. ಈ ಗಿರಣಿಗಳಲ್ಲಿ ಸರ್ಕಾರದ ಪಾಲು (ಶೇರು)ಗಳಿವೆಯೇ;

5. ಹಾಗಿದ್ದಲ್ಲಿ, ಸರ್ಕಾರದ ಶೇರಿನ ಹಣದ ಒಟ್ಟು ಮೊತ್ತವೇನು (ಗಿರಣಿಗಳ ವಿವರವನ್ನು ನೀಡುವುದು);

6. ಲಾಕ್‌ಔಟ್ ಆಗಿರುವ ಗಿರಣಿಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು):–

1. 46 (ನಲವತ್ತಾರು ಮಾತ್ರ)

2. 31,553

3. ಇಲ್ಲ.

4. ಹೌದು.

5. ವಿವರಗಳನ್ನು ಪಡೆದು ಸಭೆಯ ಮುಂದೆ ಮಂಡಿಸಲಾಗುವುದು.

6. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಗೆ ವಿಶ್ವ ಬ್ಯಾಂಕಿನಿಂದ ಆರ್ಥಿಕ ಸಹಾಯ ಪಡೆಯುವ ಬಗ್ಗೆ

2178: ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಗೆ ಮತ್ತು ರೇಷ್ಮೆ ಉದ್ಯಮಗಳ ಅಭಿವೃದ್ಧಿಗೆ ವಿಶ್ವಬ್ಯಾಂಕ್ ಆರ್ಥಿಕ ಸಹಾಯಕ್ಕಾಗಿ ಕರಡು ಯೋಜನೆಯನ್ನು ತಯಾರಿಸಲಾಗಿದೆಯೇ;

ಆ. ಉತ್ಪಾದಕ ಮತ್ತು ಅನುತ್ಪಾದಕ ವಸ್ತುಗಳ ಮೇಲೆ ಆಗಬಹುದಾದ ವೆಚ್ಚವನ್ನು ಯೋಜನೆಯಡಿಯಲ್ಲಿ ಸಿದ್ದಪಡಿಸಲಾಗಿದೆಯೇ;

ಇ. ರೇಷ್ಮೆಯ ಗುಣಮಟ್ಟ ಮತ್ತು ಇಳುವರಿ ಸುಧಾರಣೆ ಮಾಡಲು ಹೊಸದಾಗಿ ಯೋಜನೆಯಲ್ಲಿ ಸೇರಿಸಲಾಗಿದೆಯೇ ?

ಡಾ. ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಆ. ಇಲ್ಲ.

ವಿಶ್ವಬ್ಯಾಂಕ್ ಆರ್ಥಿಕ ಸಹಾಯದ ರಾಷ್ಟ್ರೀಯ ರೇಷ್ಮೆ ಕೃಷಿ ಯೋಜನೆ ರಾಜ್ಯದಲ್ಲಿ 1–4–89ರಿಂದ ಅನುಷ್ಠಾನದಲ್ಲಿದೆ ಇದರ ಅವಧಿ 7 ವರ್ಷಗಳು.

ಆ. ಈ ಯೋಜನೆಯಡಿಯಲ್ಲಿ ತೊಡಗಿಸಿರತಕ್ಕಂತ ಹಣ ಉತ್ಪಾದಕತೆ ಗುರಿಯನ್ನು ಇಟ್ಟು ಮಾತ್ರ ತಯಾರಿಸಿದೆ. ಈ ಯೋಜನೆ ಅಡಿಯಲ್ಲಿ ನಿಗದಿಪಡಿಸಿರುವ ಮೊತ್ತ ರೂ. 64.10 ಕೋಟಿ ರೂಪಾಯಿಗಳು.

ಇ. ರೇಷ್ಮೆಯ ಗುಣಮಟ್ಟವನ್ನು ಜಾಸ್ತಿ ಮಾಡಬೇಕೆಂದು ಮಲ್ಬಿಎಂಡ್ ಬೇಸಿನ್ ಸ್ಥಾಪನೆಯನ್ನು ಹೊಸದಾಗಿ ಯೋಜನೆಯಲ್ಲಿ ಸೇರಿಸಲಾಗಿದೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳಿಂದ ಮಾಹೆಯಾನ ಹಾಗೂ ವರ್ಷಕ್ಕೆ ಉತ್ಪಾದನೆಯಾಗುವ ಸಕ್ಕರೆ ಪ್ರಮಾಣ ಕುರಿತು

2179: ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು (ಸಹಕಾರಿ ಕ್ಷೇತ್ರ, ಖಾಸಗಿ ಕ್ಷೇತ್ರ, ಸಾರ್ವಜನಿಕ ಕ್ಷೇತ್ರಕ್ಕೆ ಪ್ರತ್ಯೇಕ ಮಾಹಿತಿ ನೀಡುವುದು);

ಆ. ಅವುಗಳ ಪೈಕಿ ಮುಚ್ಚಲ್ಪಟ್ಟಿರುವ ಕಾರ್ಖಾನೆಗಳಾವುವು;

ಇ. ಎಲ್ಲಾ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳಿಂದ ಮಾಹೆಯಾನ ಹಾಗೂ ವರ್ಷಕ್ಕೆ ಉತ್ಪಾದನೆಯಾಗುವ ಸಕ್ಕರೆ ಉತ್ಪಾದನೆ ಎಷ್ಟು;

ಈ. ಒಂದು ಟನ್ ಸಕ್ಕರೆಗೆ ಸರ್ಕಾರ ನಿಗದಿಪಡಿಸಿರುವ ಬೆಲೆ ಏನು;

ಉ.- ಸಕ್ಕರೆ ಕಾರ್ಖಾನೆಯಿಂದ ಕಾರ್ಖಾನೆಗೆ ಸಕ್ಕರೆ ಬೆಲೆಯಲ್ಲಿ ಯಾವುದಾದರೂ ವ್ಯತ್ಯಾಸವಿರುವುದೇ ?

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):–

ಅ. ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. (ವಿವರವನ್ನು ಅನುಬಂಧ – ಅ ದಲ್ಲಿ ನೀಡಲಾಗಿದೆ)

ಆ. ಅವುಗಳ ಪೈಕಿ ಸಹಕಾರಿ ಕ್ಷೇತ್ರದ ಒಂದು ಕಾರ್ಖಾನೆ (ವಾಣಿವಿಲಾಸ್ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಹಿರಿಯೂರು, ಚಿತ್ರದುರ್ಗ ಜಿಲ್ಲೆ) ಮುಚ್ಚಲ್ಪಟ್ಟಿದೆ.

ಇ. ಎಲ್ಲಾ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳಿಂದ ಮಾಹೆಯಾನ ಹಾಗೂ ವರ್ಷಕ್ಕೆ ಉತ್ಪಾದನೆಯಾಗುವ ಸಕ್ಕರೆ ಪ್ರಮಾಣ ಈ ಕೆಳಕಂಡಂತೆ ಇರುತ್ತದೆ.

ಹಂಗಾಮಿನಲ್ಲಿ ಮಾಹೆಯಾನ ಸರಾಸರಿ ಸಕ್ಕರೆ ಉತ್ಪಾದನೆ	1.66 ಲಕ್ಷ ಮೆ.ಟನ್
ವರ್ಷಕ್ಕೆ ಉತ್ಪಾದನೆಯಾಗುವ ಸಕ್ಕರೆ ಉತ್ಪಾದನೆ	10.35 ಲಕ್ಷ ಮೆ.ಟನ್

(1991-92ರ ಅಂಕಿ ಅಂಶಗಳ ಪ್ರಕಾರ)